ದಿನಾಂಕಃ 11-07-2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ

ಸಂಸ್ಥೆ ನೋಂದಣಿಯಾದ ನೋಂದಣಿ ಪ್ರಮಾಣ ಪತ್ರದ ನಕಲನ್ನು ಸಾಕ್ಷಿಗೆ ತೋರಿಸಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-**2** ಎಂದು ಗುರುತಿಸಲಾಯಿತು. 1 ಮತ್ತು 2 ನೇ ಆರೋಪಿತರ ಹಾಜರಾತಿ ವಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ಸೆಪ್ಟೆಂಬರ್ 2012 ರಿಂದ ಅಗಷ್ಟ್ 2013 ರವರೆಗಿನ ವಹಿ ಇದ್ದು ಅದನ್ನು ನಿಪಿ-**3** ಎಂದು ಗುರುತಿಸಲಾಯಿತು. ಅದರಲ್ಲಿರುವ ಆರೋಪಿತರ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳಲ್ಲಿರುವ ಆರೋಪಿತರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-**3** ಎ ಮತ್ತು **3** ಬಿ ಎಂದು ಗುರುತಿಸಲಾಯಿತು.

ಸಾಕ್ಷಿಯು ಛಬ್‌ಕೀ (ಜುವೇಲರಿ ಲಾಕರ್ ಕೀ) ವಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-**4** ಎಂದು ಗುರುತಿಸಲಾಯಿತು. ಅದು ಆರೋಪಿತರ ವಶದಲ್ಲಿ ಇರುತ್ತಿತ್ತು. ಅದರಲ್ಲಿಯ ಆರೋಪಿತರ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ-4 ರಲ್ಲಿರುವ 1 ಮತ್ತು 2 ನೇ ಆರೋಪಿತರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-**4** ಎ ಮತ್ತು **4** ಬಿ ಎಂದು ಗುರುತಿಸಲಾಯಿತು. ಆಭರಣಗಳ ದಾಸ್ತಾನು ವಹಿಯನ್ನು ಮತ್ತು ಅದರಲ್ಲಿರುವ ಆರೋಪಿತರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-**5** ಎಂದು, ಸಹಿಗಳನ್ನು ನಿಪಿ-**5** ಎ ಮತ್ತು **5** ಬಿ ಎಂದು ಗುರುತಿಸಲಾಯಿತು. ನಿಪಿ-5 ಎರಡು ಜನ ಆರೋಪಿತರ ವಶದಲ್ಲಿ ಇತ್ತು.

ನಮ್ಮ ಗ್ರಾಹಕರಿಗೆ ಆಭರಣ ಸಾಲ ಮಂಜೂರಾದ ಬಗ್ಗೆ 22 ಸಾಲದ ಪ್ರತಿಗಳನ್ನು ಹಾಜರಪಡಿಸಿದ್ದು ಅವುಗಳನ್ನು **6** ರಿಂದ **27** ಎಂದು ಗುರುತಿಸಲಾಯಿತು. ಅವುಗಳಿಗೆ 1 ನೇ ಆರೋಪಿಯು ಸಹಿ ಮಾಡಿದ್ದಾನೆ. 1 ನೇ ಆರೋಪಿಯ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-**6** ಎ ರಿಂದ **27** ಎ ಎಂದು ಗುರುತಿಸಲಾಯಿತು. 13 ಸಾಲಗಾರರು ಬರೆದುಕೊಟ್ಟ ಸಾಲಕ ಕರಾರು ಮತ್ತು ನಿಬಂಧನೆಗಳು ಹಾಜರಪಡಿಸಿದ್ದು ಅವುಗಳನ್ನು ನಿಪಿ-**28** ರಿಂದ **40** ಎಂದು ಗುರುತಿಸಲಾಯಿತು. ಎರಡು ರಶೀದಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-**41** ಮತ್ತು **42** ಎಂದು ಗುರುತಿಸಲಾಯಿತು. ಅವುಗಳಲ್ಲಿರುವ ಆರೋಪಿತರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-**41** ಎ ಮತ್ತು **41** ಬಿ , ನಿಪಿ-**42** ಎ ಮತ್ತು **42** ಬಿ ಎಂದು

ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿದ್ದಾರೆ.

ಪಾಟೀ ಸವಾಲುಃ **1** ನೇ ಆರೋಪಿ ಪರ ವಕೀಲರಿಂದ

ನಾನು ಶ್ರೀರಾಮ ಚಿಟ್ಸ್ ಫಂಡನಲ್ಲಿ ವ್ಯವಸ್ಥಾಪಕ ಎಂದು ಕೆಲಸ ನಿರ್ವಹಿಸುತ್ತಿದ್ದೇನೆ. ನನ್ನ ಶಾಖೆ ಮತ್ತು ಆಭರಣ ಸಾಲದ ಶಾಖೆ ಬೇರೆ ಎಂದರೆ ಸರಿ, ಆದರೆ ನಾನು ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತೇನೆ. ಆಭರಣ ಸಾಲದ ಶಾಖೆಯಲ್ಲಿ ನನಗೆ ಯಾವುದೇ ಅಧಿಕಾರ ಇರಲಿಲ್ಲ. ಆಭರಣ ಸಾಲದ ವಿಭಾಗದಲ್ಲಿ ಒಟ್ಟು 26 ಸಿಬ್ಬಂದಿ ಇದ್ದರು. ಆಭರಣ ಸಾಲದ ಶಾಖೆಯ ಕಛೇರಿಯಲ್ಲಿ ಸಿಸಿಟಿವಿ ಅಳವಡಿಸಲಾಗಿತ್ತು ಎಂದರೆ ಸರಿ. ಆ ಸಿಸಿ ಟಿವಿಯಲ್ಲಿ ಗ್ರಾಹಕರೊಂದಿಗೆ ಆಭರಣ ಸಾಲ ವ್ಯವಹಾರ ಮಾಡುವುದನ್ನು ಮತ್ತು ಲಾಕರ್ ನಲ್ಲಿ ಇಡುವುದನ್ನು ಸೆರೆಹಿಡಿಯಬಹುದು ಎಂದರೆ ಸರಿ. ನಾನು ಸಿಸಿಟಿವಿ ದೃಶ್ಯವನ್ನು ಪೋಲೀಸರಿಗೆ ನೀಡಿಲ್ಲ.

ಜುವೇಲರಿ ಲಾಕರ್ ಗೆ ಎರಡು ಬೀಗ ಇರುತ್ತವೆ ಎಂದರೆ ಸರಿ. ಲೆಕ್ಕಿಗನ ಹತ್ತಿರ ಒಂದು ಬೀಗ ಇರುತ್ತದೆ ಎಂದರೆ ಸರಿ ಅಲ್ಲ. ಆ ಸಂದರ್ಭದಲ್ಲಿ ಶಿವಕುಮಾರ ಎನ್ ಎನ್ನುವವರು ಲೆಕ್ಕಿಗನಾಗಿ ಕೆಲಸ ಮಾಡುತ್ತಿದ್ದ. ಅವರು ಕೆಲಸ ನಿರ್ವಹಿಸಿದ ಬಗ್ಗೆ ದಾಖಲೆಯನ್ನು ಪೋಲೀಸರಿಗೆ ನೀಡಿಲ್ಲ.

ವ್ಯವಸ್ಥಾಪಕರು ಎಲ್ಲ ಆಭರಣ ಸಾಲದ ದಾಖಲೆಗಳಿಗೆ ಸಹಿ ಮಾಡುವುದು ಅವಶ್ಯಕತೆ ಇದೆ ಎಂದರೆ ಸರಿ. ಆಭರಣವನ್ನು ಲಾಕರ್ ನಲ್ಲಿ ಇಡುವಾಗ ಮತ್ತು ಮರಳಿ ಗ್ರಾಹಕರಿಗೆ ನೀಡುವಾಗ ಎರಡು ವಹಿಗಳನ್ನು ಇಡುತ್ತೇವೆ ಎಂದರೆ ಸರಿ. ಅವು ಸ್ಟಾಕ್ ರಜಿಸ್ಟರ ಮತ್ತು ರಿಡಂಪ್ಟನ್ ರಜಿಸ್ಟರ ಎಂದರೆ ಸರಿ. ರಿಡಂಪ್ಟರ್ ರಜಿಸ್ಟರನ್ನು ಪೋಲೀಸರಿಗೆ ನೀಡಿಲ್ಲ. ಸ್ಟಾಕ್ ರಜಿಸ್ಟರ ಮತ್ತು ರಿಡಂಪ್ಟನ್ ರಜಿಸ್ಟರಗಳನ್ನು ತುಲನೆ ಮಾಡಿ ನೋಡಿದಾಗ ಏನು ವ್ಯವಹಾರ ನಡೆಯುತ್ತಿದೆ ಎಂದು ಗೊತ್ತಾಗುತ್ತದೆ ಎಂದರೆ ಸರಿ.

ನಿಪಿ-4 ರಲ್ಲಿ ದಿಃ 23-08-2013 ರಂದು ಕೀ ನಂ.2 ಕ್ಕೆ ಸಂಬಂಧಿಸಿದಂತೆ ಶಿವಕುಮಾರ ಎನ್ ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ-4 ರಲ್ಲಿ ದಿಃ 23-08-2013 ರಂದು 1 ನೇ ಆರೋಪಿಯು ಸಹಿ ಮಾಡಿಲ್ಲ ಎಂದರೆ ಸರಿ. ನಿಪಿ-4 ರಲ್ಲಿ ದಿಃ 13-07-2013 ರಂದು 1 ನೇ ಆರೋಪಿಯ ಸಹಿ ಇದೆ ಎಂದರೆ ಸರಿ. ದಿಃ 13-07-2013 ರ ನಂತರ ನಿಪಿ-4 ರಲ್ಲಿ ಇಪ್ತೆಕಾರ ಹುಸೇನ, ಶಿವಕುಮಾರ ಎನ್ ಮತ್ತು ಈರಮ್ಮರವರ ಸಹಿಗಳು ಇವೆ ಎಂದರೆ ಸರಿ. ದಿಃ 13-07-2013 ರಿಂದ 1 ನೇ ಆರೋಪಿಯು ಯಾವುದೇ ಕೀ ಹೊಂದಿರಲಿಲ್ಲ ಎಂದರೆ ಸರಿ.

ನಿಪಿ-5 ರಲ್ಲಿ 1 ನೇ ಆರೋಪಿಯ ಚಿಕ್ಕ ರುಜು ಇವೆ.

ಶಿವಕುಮಾರ ಎನ್ ರವರ ಸಹಿಯನ್ನು ನಾನು ನೋಡಿದರೆ ಗುರುತಿಸಲಾಗುವುದಿಲ್ಲ. ನಿಪಿ-4 ರಲ್ಲಿ ದಿಃ 23-08-2013 ರಂದು 2 ನೇ ಕೀ ವಿಚಾರವಾಗಿ ಶಿವಕುಮಾರ ಎನ್ ರವರು ಸಹಿ ಮಾಡಿದ್ದಾರೆ.

ದಿಃ 25-06-2013 ರಂದು ನಿಪಿ-5 ರಲ್ಲಿ ಜೆ ಸಿ 2 ರಲ್ಲಿರುವ ಸಹಿಯು ಶಿವಕುಮಾರ ಎನ್ ರವರ ಸಹಿ. ದಿಃ 25-06-2013 ರಿಂದ 23-08-2013 ರವರೆಗೆ ಜೆಸಿ 2 ರ ಕಾಲಂನಲ್ಲಿ ಶಿವಕುಮಾರ ಎನ್ ರವರೇ ಸಹಿ ಮಾಡಿದ್ದಾರೆ ಎಂದರೆ ಸರಿ. ನಿಪಿ-5 ರಲ್ಲಿ ದಿಃ 15-07-2013 ಮತ್ತು 16-08-2013 ರಂದು ಮಾತ್ರ 1 ನೇ ಆರೋಪಿ ಸಹಿ ಇದೆ ಎಂದರೆ ಸರಿ. ದಿಃ 22-08-2013 ಮತ್ತು 23-08-2013 ರಂದು ಜೆಸಿ 1 ರಲ್ಲಿ ಇಫ್ತೆಕಾರ ಹುಸೇನರವರ ಸಹಿ ಇದೆ. ಲಾಕರ್ ಕಸ್ಟಡಿಯು ಜೆಸಿ 1 ಮತ್ತು 2 ರಲ್ಲಿ ಯಾರು ಸಹಿ ಮಾಡುತ್ತಾರೋ ಅವರ ವಶದಲ್ಲಿ ಇರುತ್ತದೆ ಎಂದರೆ ಸರಿ. ನಿಪಿ-5 ನ್ನು ಪ್ರತಿದಿನ ಯಾರು ಪ್ರಭಾರ ವಹಿಸಿಕೊಳ್ಳುತ್ತಾರೋ ದಾಸ್ತಾನು ಪರೀಶೀಲಿಸಿ ವಹಿಸಿಕೊಳ್ಳುತ್ತಾರೆ ಎಂದರೆ ಸರಿ. ದಿಃ 25-06-2013 ರಿಂದ 23-08-2013 ರ ಅವಧಿಯಲ್ಲಿ ಕೇವಲ ದಿಃ 15-07-2013 ಮತ್ತು 16-08-2013 ರಂದು ಮಾತ್ರ ಜೆಸಿ 1 ರಲ್ಲಿ 1 ನೇ ಆರೋಪಿ ಸಹಿ ಮಾಡಿದ್ದಾನೆ ಎಂದರೆ ಸರಿ. ಜೆಸಿ-1 ರ ಪ್ರಭಾರದಲ್ಲಿ ಇರುವವರು ರಜೆ ಮೇಲೆ ಇದ್ದಾಗ ಅಥವಾ ಗೈರು ಹಾಜರ ಇದ್ದಾಗ, ಪ್ರಭಾರ ವಹಿಸಿಕೊಂಡವರು ಈ ರೀತಿ ಸಹಿ ಮಾಡುತ್ತಾರೆ ಎಂದರೆ ಸರಿ. ದಿಃ 25-06-2013 ರಿಂದ 1 ನೇ ಆರೋಪಿಯು ಲಾಕರ್ ನ ಪ್ರಭಾರ ಹೊಂದಿರಲಿಲ್ಲ ಎಂದರೆ ಸರಿ.

ನಮ್ಮ ಸಂಸ್ಥೆಯಲ್ಲಿ ಪ್ರತಿವರ್ಷ 4 ಬಾರಿ 3 ತಿಂಗಳಿಗೊಮ್ಮೆ ಲೆಕ್ಕ ಪರಿಶೋಧನೆ ಮಾಡುತ್ತಾರೆ. ಲೆಕ್ಕ ಪರಿಶೋಧನಾ ವರದಿಯನ್ನು ಪೋಲೀಸರಿಗೆ ನೀಡಿದ್ದೇವೆ. ದಿಃ 23-08-2013 ರಂದು ಲೆಕ್ಕ ಪರಿಶೋಧನೆ ಮಾಡಿದ ವರದಿಯನ್ನು ಪೋಲೀಸರಿಗೆ ನೀಡಿದ್ದೇನೆ. ಅದನ್ನು ದೂರಿನೊಂದಿಗೆ ನೀಡಿದ್ದೆ. ಆ ವರದಿಯಲ್ಲಿ ಯಾವುದೇ ಶರ ಬರೆದಿರಲಿಲ್ಲ. ಯಾವುದೇ ರೀತಿಯ ಅವ್ಯವಹಾರ ನಡೆದರೇ ಲೆಕ್ಕ ಪರಿಶೋಧನಾ ವರದಿಯಲ್ಲಿ ಶರ ಬರೆಯುತ್ತಾರೆ ಎಂದರೆ ಸರಿ. ಲೆಕ್ಕ ಪರೀಶೋಧನೆ ಮುಗಿದ ನಂತರ ಅಂತಿಮ ವರದಿಯನ್ನು ಪೋಲೀಸರಿಗೆ 3-4 ದಿನಗಳ ನಂತರ ನೀಡಿದ್ದೇನೆ.

ನಿಪಿ-42 ದಿಃ 19-07-2014 ರ ರಶೀದಿ ಇದೆ. ನಿಪಿ-42 ನ್ನು ಈ ಪ್ರಕರಣಗೋಸ್ಕರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿ ಅಲ್ಲ. ನಿಪಿ-42 ರಲ್ಲಿ ಯಾವ ಆಭರಣಕ್ಕಾಗಿ ನೀಡಲಾಗಿದೆ ಎಂದು ನಮೂದಿಸಿಲ್ಲ ಎಂದರೆ ಸರಿ ಅಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಮುಂದೂಡಲಾಯಿತು)

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.